ಅರ್ಜಿ ನಂಬ್ರ 2 ಮತ್ತು 3 ರ ಮಧ್ಯಂತರ ಆದೇಶದ ಪ್ರಕಾರ ಸಾಕ್ಷಿಯನ್ನು ದಿನಾಂಕ **11-11-2025** ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

## ಮುಂದುವರೆದ ಮುಖ್ಯ ವಿಚಾರಣೆಃ ವಾದಿಯ ಪರವಾಗಿ ಶ್ರೀಮತಿ ಸಿ.ವಿ.ಜಿ. ವಕೀಲರಿಂದಃ

ನನ್ನ ವಾದಕ್ಕೆ ಪೂರಕವಾಗಿ ದಿನಾಂಕ 26-01-2022 ರ ಒಪ್ಪಂದ ಕರಾನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, ಸದರಿ ನಿಪಿ-6 ರಲ್ಲಿರುವ ಮೊದಲ ಪುಟದಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಗುರುತಿಸಿದ್ದು ಅದನ್ನು ನಿಪಿ-6(ಎ) ಎಂದು, 2 ನೇ ಪುಟದಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಗುರುತಿಸಿದ್ದು ಅದನ್ನು ನಿಪಿ-6(ಬಿ) ಎಂದು, ಮೊದಲನೇ ಪುಟದಲ್ಲಿರುವ ಹಾಗೂ ಎರಡನೇ ಪುಟದಲ್ಲಿರುವ ಪ್ರತಿವಾದಿಯ ಸಹಿಯನ್ನು ನಾನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-6(ಬಿ) ಹಾಗೂ ನಿಪಿ-6(ಸಿ) ಎಂದು ಗುರುತಿಸಲಾಯಿತು. ಸದರಿ ನಿಪಿ-6 ರಲ್ಲಿರುವ ಸಾಕ್ಷಿದಾರರ ಸಹಿಗಳನ್ನು ನಾನು ನೋಡಿ ಗುರುತಿಸಿರುತ್ತೇನೆ. ನಿಪಿ-6 ರ ದಾಖಲೆಯನ್ನು ನಾರಾಯಣ ಕೆ.ವಕೀಲರ ಬಳಿ ತಯಾರಿಸಿದ್ದು, ಸದರಿ ನಾರಾಯಣ ಕೆ. ವಕೀಲರು ಸದರಿ ದಾಖಲೆಯನ್ನು ತಯಾರಿಸಿದ ಬಗ್ಗೆ ಅದಕ್ಕೆ ಸಹಿಯನ್ನು ಹಾಕಿದ್ದು, ಸದರಿ ಸಹಿಯನ್ನು ನಾನು ನೋಡಿ ಗುರುತಿಸುತ್ತೇನೆ.

ಆದ್ದರಿಂದ ನನ್ನ ವಾದಪತ್ರದಲ್ಲಿ ಹೇಳಿದಂತೆ ಡಿಕ್ರಿ ಮಾಡಬೇಕಾಗಿ ಪ್ರಾರ್ಥನೆ.

## ಪಾಟೀ ಸವಾಲುಃ ಪ್ರತಿವಾದಿಯ ಪರವಾಗಿ ಶ್ರೀ ಎಸ್.ಎನ್.ವಕೀಲರಿಂದಃ

**ಸಾಕ್ಷಿಯ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಮೇರೆಗೆ ಕಾಲಾವಕಾಶ ನೀಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ, ದ.ಕ.